ಶಾಸನದ ೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೩೦ (ಎ)ಕಲಮನ್ನು ಮಾರ್ಪಾಡಿನೊಂದಿಗೆ ಶಾಸನದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಅನ್ವಯಿಸುವುದರ ಬಗ್ಗೆ ದಿನಾಂಕ ೭-೩-೧೯೮೮ರಂದು ಹೊರಡಿಸಲಾದ ಸಿಎಂಡಬ್ಲ್ಯೂಸಿ ಸಿಎಲ್‌ಎಂ ೮೮ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಎಲ್ಲಾ ಕಾಗದ ಪತ್ರಗಳನ್ನೂ ಸಭೆಯ ಮುಂದಿಡಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಅಧ್ಯಕ್ಷರು —ಸರ್ಕಾರಿ ಭರವಸೆಗಳ ಸಮಿತಿ).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರಿ ಭರವಸೆಗಳ ಸಮಿತಿಯ ೫ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಡಿ. ಟಿ. ಜಯಕುಮಾರ್ (ಅಧ್ಯಕ್ಷರು — ಅಧೀನ ಶಾಸನ ರಚನಾ ಸಮಿತಿ).—ಮಾನ್ಯ ಅಧ್ಯಕ್ಷರೇ, ಅಧೀನ ಶಾಸನ ರಚನಾ ಸಮಿತಿಯ ಏಳು, ಎಂಟು, ಒಂಬತ್ತು ಹಾಗೂ ೧೦ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಸೌಲಭ್ಯ ಹಾಗೂ ಬೆಂಗಳೂರಿನಲ್ಲಿ ಸೆವಿಂ ಲಕ್ಷುರಿ ಬಸ್ಸಿಗೆ ಬುಕ್ಕಿಂಗ್ ಸೌಲಭ್ಯಕ್ಕೆ ಸಂಬಂಧಪಟ್ಟ ಮನವಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ ಪ್ರಸ್ತಾವಕ್ಕೆ ಅನುಮತಿ ಕೋರಿಕೆ

ರೈತರಿಗೆ ಹತ್ತಿ ಮತ್ತಿತರ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸದೇ ಇರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ರೈತರಿಗೆ ಸಂಬಂಧಪಟ್ಟ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ತವಂಗೆ ಕೊಟ್ಟಿರುತ್ತೇನೆ. ಈಗ ತಮ್ಮ ಮನಸ್ಸನ್ನು ಈ ವಿಷಯವನ್ನು ಚರ್ಚಿಸಲು ಅವಕಾಶ ನೀಡಲು ತಮ್ಮ ಒಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ, ರಾಜ್ಯದಲ್ಲಿ ಸತತವಾಗಿ ಕಳೆದ ೪-೫ ವರ್ಷಗಳಿಂದಲೂ ಭೀಕರ ಬರಗಾಲವಿದ್ದು ಈಗ ಕೆಲವು ದಿವಸಗಳಿಂದ ಮಳೆಯಾಗುತ್ತಿದೆ. ಖುಷ್ಕಿ ಭೂಮಿಯಲ್ಲಿ, ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನು ೫-೬ ದಿವಸಗಳಲ್ಲಿ ಬಿತ್ತನೆ ಕೆಲಸ ಪ್ರಾರಂಭಿಸುವ ಮಟ್ಟದಲ್ಲಿ ರೈತರಿದ್ದಾರೆ ಆದರೆ, ಕೃಷಿ ಇಲಾಖೆಯಲ್ಲಿ ಬಿತ್ತನೆಗೆ ಯೋಗ್ಯವಾದ ಡಿ.ಸಿ.ಹೆಚ್. ಹತ್ತಿ ಬೀಜ, ಜೋವಾರ್, ಸೂರ್ಯಕಾಂತಿ ಬೀಜ ಅಗತ್ಯಕ್ಕೆ ಬೇಕಾದಷ್ಟು ಇಲ್ಲದೇ ಬಿತ್ತನೆ ಕಾರ್ಯಕ್ಕೆ ತೊಂದರೆಯಾಗಿದೆ. ಹೋದವರ್ಷ ಡಿ.ಸಿ.ಹೆಚ್. ಹತ್ತಿ ಬೆಳೆಗೆ ಒಳ್ಳೆಯ ಬೆಲೆ ಸಿಕ್ಕಿದ್ದರಿಂದ, ಹತ್ತಿ ಬಿತ್ತನೆ ಕಾರ್ಯವನ್ನು ರೈತರು ಪ್ರಾರಂಭಿಸುತ್ತಾರೆ. ದಾವಣಗೆರೆ ಮತ್ತಿತರೆ ಕಡೆಗಳಲ್ಲಿ ಬೀಜ ನಿಗಮದಿಂದ ರೈತರಿಗೆ ಬೀಜಗಳನ್ನು ಬೆಳೆಸುವಂತಹ ಪ್ರಯತ್ನ ಮಾಡಿದ್ದಾರೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ ಕೃಷಿ ಇಲಾಖೆಯವರು, ಬೀಜ ನಿಗಮದವರು, ಬೀಜಗಳನ್ನು ಬೆಳೆದಂತಹ ರೈತರು ಶಾಮೀಲಾಗಿ ಬೀಜ ನಿಗಮಕ್ಕೆ ಬೀಜಗಳನ್ನು ಕೊಡದೆ ಇವತ್ತು ರೈತರಿಗೆ ತೊಂದರೆಗೆ ಕಾರಣವಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿಂತೂ ಶಿಕಾರಿಪುರ ತಾಲ್ಲೂಕಿನಲ್ಲಿ ೧೫೦ ಕ್ವಿಂಟಾಲ್ ಬೀಜದ ಅವಶ್ಯಕತೆ ಇದ್ದರೆ ಕೇವಲ ೫೦ ಕ್ವಿಂಟಾಲ್ ಬೀಜವನ್ನು

ಮಾತ್ರ ಸರಬರಾಜು ಮಾಡಿದ್ದಾರೆ. ೭೦೦ ಗ್ರಾಮ ಇರುವಂತಹ ಒಂದು ಪೊಟ್ಟಣವನ್ನು ಕೊಟ್ಟಿದ್ದಾರೆ ೫-೬ ಎಕರೆ ಭೂಮಿಗೆ ಬೇಕಾದ ಬೀಜ ಸಿಗುತ್ತಿಲ್ಲ. ವಿಶೇಷವಾಗಿ ಹೆತ್ತಿ ಬೀಜ ಸಿಗುತ್ತಿಲ್ಲ. ಇದುವರೆಗೆ ವಿತರಣೆ ಕೆಲಸವನ್ನು ಪ್ರಾರಂಭಿಸದೇ ರಾಜ್ಯದ ರೈತರು ಬಿತ್ತನೆ ಬೀಜ ಸಿಗದೆ ಬಹಿರಂಗ ಮಾರುಕಟ್ಟೆಯಲ್ಲಿ ಕಳಪೆ ಬೀಜವನ್ನು ಹೆಚ್ಚಿನ ಬೆಲೆಗೆ ಪಡೆದು ಮೋಸ ಹೋಗುತ್ತಿದ್ದಾರೆ. ಒಂದು ಕೆ.ಜಿ.ಗೆ ೮೦ ರೂಪಾಯಿ ಇರುವಂತಹ ಬೀಜವನ್ನು ೭೦೦ ಗ್ರಾಂಗೆ ೧೭೨ ರೂಪಾಯಿಗಳನ್ನು ಕೊಟ್ಟು ಕೊಂಡಿದ್ದಾರೆ. ೨೬-೪-೧೯೮೮ರಲ್ಲಿ ಅರಸೀಕೆರೆ ಕೃಷಿ ಇಲಾಖೆಯಲ್ಲಿ, ಬಹಿರಂಗ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಬೀಜವನ್ನು ೬೦೦ ರೂಪಾಯಿಗೆ ತೆಗೆದುಕೊಂಡು, ೧೧ ರೂಪಾಯಿಗೆ ನಿಗಮದಿಂದ ಮಾರಿದ್ದಾರೆ. ಒಂದು ಬಿಳಿ ಕಾಗದದಲ್ಲಿ ರಶೀತಿಯೆಂದು ಕೊಟ್ಟಿದ್ದಾರೆ. ಕೃಷಿ ಇಲಾಖೆಯವರು ಡೂಪ್ಲಿಕೇಟ್ ಬೀಜ ಮಾರುವುದು ಅಕ್ಷಮ್ಯ ಅಪರಾಧವಲ್ಲವೇ, ಇವತ್ತು ರಾಜ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ಹೆತ್ತಿ ಬೀಜ, ಸೂರ್ಯಕಾಂತಿ ಬೀಜ, ಜೋಳವನ್ನು ಬಿತ್ತನೆಗಾಗಿ ಶೇಖರಿಸಿಡಲಾಗಿದೆ ಎಷ್ಟು ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮ ಮಂಡಳಿ, ಬಿತ್ತನೆ ಬೀಜಗಳನ್ನು ಬೆಳೆಯಂತಹ ವ್ಯವಸ್ಥೆ ಮಾಡಲಾಯಿತು. ರಾಜ್ಯದ ರೈತನ ಹಿತದೃಷ್ಟಿಯಿಂದ ಬರಗಾಲದ ತುತ್ತ ತುದಿಗೆ ಒಳಗಾಗಿದ್ದ, ರೈತನ ಅನುಕೂಲಕ್ಕಾಗಿ ಬೀಜಗಳ ವಿತರಣೆ ಕಾರ್ಯವನ್ನು ಮಾಡಲಾಗಿದೆ. ಕೃಷಿ ಇಲಾಖೆಯಲ್ಲಿ ಮಾನಿಟರಿಂಗ್ ಮಾಡುವ ದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳು ಈ ಒಂದು ವ್ಯವಸ್ಥೆಯನ್ನು ನೋಡಿಕೊಳ್ಳುವಂತಹ ವ್ಯವಸ್ಥೆ ಮಾಡಲಾಗುವುದೇ ? ಈ ವಿಚಾರಗಳನ್ನು ಕೂಲಂಕುಷವಾಗಿ ಚರ್ಚೆ ಮಾಡಲು ಈ ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಸರಿಯಾದ ನಿಯಮದ ಪ್ರಕಾರ ನಿಲುವಳಿ ಸೂಚನೆಯನ್ನು ತಂದಿಲ್ಲ. ಶಿಷ್ಟಾಚಾರ ರೂಲ್ ಪ್ರಕಾರ ಈ ದಿನವೂ ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಬಿ. ಎಸ್ ಯಡಿಯೂರಪ್ಪನವರು ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ಮೂರನೆಯದಾಗಿ ಕೃಷಿಗೆ ಸಂಬಂಧಪಟ್ಟಂತೆ ಬೇಡಿಕೆಗಳು ಇವತ್ತೇ ಇರುವುದರಿಂದ ಆ ಬಗ್ಗೆ ಎಲ್ಲಾ ವಿಚಾರಗಳನ್ನು ಆ ಸಮಯದಲ್ಲಿ ಪ್ರಸ್ತಾಪ ಮಾಡಬಹುದು. ಆದ್ದರಿಂದ ಅವರು ತಂದಿರುವಂತಹ ನಿಲುವಳಿ ಸೂಚನೆಗೆ ಅವಕಾಶ ಕೊಡುವುದು ಸೂಕ್ತವಾದುದಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದ ಹಾಗೆ ನಿಲುವಳಿ ಸೂಚನೆಯ ಮೂಲಕ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಹೆತ್ತಿ ಬೀಜದ ಕೊರತೆ ಇರುವುದು ನಿಜ. ಮತ್ತೊಂದು ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಅದೇನೆಂದರೆ ಅಧಿಕಾರಿಗಳು ಶಾಮೀಲಾಗಿ ಕಳಪೆ ಬೀಜವನ್ನು ಮಾರಾಟ ಮಾಡುತ್ತಿರುವುದು, ಅಥವಾ ಒಳ್ಳೆಯ ಬೀಜವನ್ನು ರಿಜೆಕ್ಟ್ ಮಾಡುವಂತಹದ್ದು ನಡೆಯುತ್ತಿವೆ ಎಂಬುದಾಗಿ ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಆಷ್ಟೇ ಅಲ್ಲ. ಎಲ್ಲಾ ಮಾನ್ಯ ಸದಸ್ಯರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ ಇಂತಹ ಯಾವುದಾದರೂ ಆರೋಪಗಳು ಇದ್ದರೆ ನೇರವಾಗಿ ನನಗೆ ಹೇಳಬೇಕು. ಆಗ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು. ನಮ್ಮ ರಾಜ್ಯದಲ್ಲಿ ಆಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲಿ ಏನಾಗಿದೆ ಅಂದರೆ ರೈತನಿಗೆ ಯಾವ ಕಾಲದಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು ಎಷ್ಟೆಷ್ಟು ಬೆಳೆಯ ಬೇಕೆಂಬುದು ತಿಳಿದಿಲ್ಲ. ಒಂದು ಉದಾಹರಣೆಗಾಗಿ ಹೇಳುವುದಾದರೆ, ೧೯೮೪-೮೫ನೇ ಸಾಲಿನಲ್ಲಿ ಇದೇ ಪ್ರಕಾರ ಹೆತ್ತಿ ಬೆಳೆಯಬೇಕೆಂಬ ಕೂಗು ರೈತರ ನಿಯೋಗ ಬಂದಾಗ ಸರ್ಕಾರ ಗ್ಯಾರಂಟಿಕೊಟ್ಟು ಸೀಡ್ ಕಾರ್ಪೊರೇಷನ್ ಮತಿಯಿಂದ ೫,೫೦೦ ಕ್ವಿಂಟಾಲ್ ಹೆತ್ತಿ ಬೀಜವನ್ನು ಸ್ಟಾಕ್ ಇಡಿಸಲಾಗಿತ್ತು. ಆದರೆ ೧೯೮೫-೮೬ನೇ ಸಾಲಿನಲ್ಲಿ ಮಾರಾಟವಾದಂತಹ ಬೀಜ ೨,೨೦೦ ಕ್ವಿಂಟಾಲ್ ಮಾತ್ರ. ನಂತರ ೧೯೮೬-೮೭ನೇ ಸಾಲಿನಲ್ಲಿ ೨,೩೦೦ ಕ್ವಿಂಟಾಲ್ ಮಾತ್ರ. ಆದರ ನಂತರ ಅದಕ್ಕೆ ಡಿಮ್ಯಾಂಡ್ ಹೊಯಿತು ವೈಟ್ ಫ್ಲೈ ಮಿನಿಯುಲ್ ರೋಗ ಬಂತು. ನಂತರ ಬೀಜ ನಿಗಮದ ಮತಿಯಿಂದ ೬೦ ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಪ್ರಕಾರ ಮಾರಾಟ ಮಾಡಿದ್ದೇವೆ. ಇದರಿಂದಾಗಿ ಸೀಡ್ ಕಾರ್ಪೊರೇಷನ್ ಗ್ಯಾರಂಟಿ ಏನು ಕೊಟ್ಟಿದೆ, ಅದರ ಪ್ರಕಾರ ಸರ್ಕಾರ ೨.೨೦ ಲಕ್ಷ ರೂಪಾಯಿಗಳನ್ನು ಆ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ. ಕಳೆದ ವರ್ಷ ಏಕ್‌ದಮ್ ಈ ಹೆತ್ತಿ ಬೀಜಕ್ಕೆ ಡಿಮ್ಯಾಂಡ್ ಬಂತು. ಈ ವರ್ಷ ಈ ಬೀಜವನ್ನು ಕ್ವಿಂಟಾಲ್ ೧೨೦೦ ರಿಂದ ೧೩೦೦ ರೂಪಾಯಿಗಳವರೆಗೆ ರೈತರು

ಮಾರಾಟ ಮಾಡಿದ್ದಾರೆ. ರೈತರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಇನ್ನಿತರೆ ಅನುಕೂಲಗಳನ್ನು ಮಾಡಿದ್ದೇವೆ. ಹತ್ತಿ ಬೀಜಗಳನ್ನು ತಕ್ಷಣವೇ ತಯಾರು ಮಾಡುವುದಕ್ಕಾಗುವುದಿಲ್ಲ. ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕು. ಅವರು ಅದರ ಬಗ್ಗೆ ಪ್ರಯೋಗವನ್ನು ಮಾಡಿ ಬೀಜವನ್ನು ತಯಾರು ಮಾಡಬೇಕಾದರೆ ಕನಿಷ್ಟ ೨ ವರ್ಷಗಳಾದರೂ ಬೇಕಾಗುತ್ತವೆ. ಈ ಬಗ್ಗೆ ಇರತಕ್ಕಂತಹ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಅಧಿಕಾರಿಗಳ ವಿಾಟಿಂಗ್‌ನ್ನು ಹಲವಾರು ಸಲ ಮಾಡಿದ್ದೇನೆ. ಖಾಸಗಿ ವಿಜಿನ್ಸಿಯಂಪರನ್ನೂ ಕೂಡ ಇದರಲ್ಲಿ ಇನ್ವಾಲ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಆಂಧ್ರದಿಂದ ತರಿಸಿ.

ಶ್ರೀ ಆರ್. ವಿ ದೇಶಪಾಂಡೆ.—ಮಹಾರಾಷ್ಟ್ರ ಸೀಡ್ಸ್ ಕಾರ್ಪೊರೇಷನ್‌ನಿಂದ ತರಿಸಿ ರೈತರಿಗೆ ಮಾರಾಟ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದೇವೆ. ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಹಾಗೂ ಈ ಬೀಜವನ್ನು ಹೆಚ್ಚು ಬೆಳೆಯಬೇಕೆಂಬ ಉದ್ದೇಶದಿಂದ ೮೧ ರೂಪಾಯಿಗಳ ಪ್ರಕಾರ ಬೀಜವನ್ನು ಕಳೆದ ವರ್ಷ ಪರ್ಚೇಸ್ ಮಾಡಿದ್ದರೆ. ಈ ವರ್ಷ ಅದೇ ಬೀಜವನ್ನು ೧೨೦ ರೂಪಾಯಿಗಳ ಪ್ರಕಾರ ಪರ್ಚೇಸ್ ಮಾಡಿದ್ದೇವೆ. ಸಿ.ಎಚ್ ೫ ಜವಾರ್ ಹಾಗೂ ಸನ್‌ಫ್ಲವರ್ ಬೀಜಗಳ ಕೊರತೆ ಇದೆ. ಆದರೂ ರೈತರಿಗೆ ಎಷ್ಟು ಅನುಕೂಲ ಮಾಡಬೇಕೊ ಅಷ್ಟೆಲ್ಲಾ ಮಾಡಿದ್ದೇನೆ. ಜೊತೆಗೆ ಇಪತ್ತೇ ನನ್ನ ಇಲಾಖೆಯ ಬೇಡಿಕೆ ಇರುವುದರಿಂದ ವಿಷದವಾಗಿ ಚರ್ಚೆ ಮಾಡುವುದು, ಆದ್ದರಿಂದ ಇದರ ಬಗ್ಗೆ ನಿಲುವಳಿ ಸೂಚನೆಗೆ ಅವಕಾಶ ಕೊಡುವುದು ಸೂಕ್ತವಲ್ಲವೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ವಿಷಯ ಬಹಳ ಮಹತ್ವವಾಗಿದ್ದು, ಇಂದೇ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಇರುವುದರಿಂದ ಆ ಸಮಯದಲ್ಲಿ ಮಾತನಾಡಲು ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಈ ಇಲಾಖೆಯ ಬೇಡಿಕೆಯ ಬಗ್ಗೆ ಚರ್ಚೆಯನ್ನು ಶ್ರೀಮಾನ್ ಲಕ್ಕಪ್ಪನವರು ಪ್ರಾರಂಭ ಮಾಡುತ್ತಾರೆ. ಅವರ ನಂತರ ನಿಮಗೇ ಅವಕಾಶವನ್ನು ಕೊಡುತ್ತೇನೆ ಆಗ ತಾವು ಹೆಚ್ಚು ವಿಚಾರಗಳನ್ನು ಸವಿಸ್ತಾರವಾಗಿ ತಿಳಿಸಬಹುದು. ಆದ್ದರಿಂದ ನೀವು ಕೊಟ್ಟಿರುವಂತಹ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೇನೆ.

೧೨-೫೦ ಪಿ. ಎಂ.

ಗಮನ ಸೆಳೆಯುವ ಸೂಚನೆ

ಕುಂದಾಪುರ ತಾಲ್ಲೂಕಿನ ನಿರೋಡಿ ಗ್ರಾಮದ ಗೌರಿಪೂಜಾರ್ತಿ ಕಾಣೆಯಾಗಿರುವ ಬಗ್ಗೆ ಪೋಲೀಸರು ನಡೆಸಿರುವ ವಿಚಾರಣೆ

ಶ್ರೀ ಬಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೮-೨-೮೮ರಂದು ಸುಶೀಲ ಎನ್ನುವ ೧೪ ವರ್ಷದ ನಿರೋಡಿ ಗ್ರಾಮದ ಬಾಲಕಿ ಬೈಂದೂರು ಠಾಣೆಗೆ ಬಂದು ತನ್ನ ತಾಯಿ ಗೌರಿ ಪೂಜಾರ್ತಿ ೫-೨-೮೮ರಿಂದ ಕಾಣೆಯಾಗಿದ್ದಾಳೆ ಎಂದು ಕೊಟ್ಟ ಫಿರ್ಯಾದಿ ಮೇರೆಗೆ ಕೇಸನ್ನು ದಾಖಲು ಮಾಡಿಕೊಂಡು ಬೈಂದೂರು ಸರ್ಕಲ್ ಇನ್ಸ್‌ಪೆಕ್ಟರ್‌ರವರು ವಿಚಾರಣೆ ನಡೆಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ದಿನಾಂಕ ೮-೨-೮೮ರಂದು ಸುಶೀಲ ಎನ್ನುವ ೧೪ ವರ್ಷದ ನೀರೋಡಿ ಗ್ರಾಮದ ಬಾಲಕಿ ಬೈಂದೂರು ಠಾಣೆಗೆ ಬಂದು ತನ್ನ ತಾಯಿ ಗೌರಿ ಪೂಜಾರ್ತಿ ೫-೨-೮೮ರಿಂದ ಕಾಣೆಯಾಗಿದ್ದಾಳೆ ಎಂದು ಕೊಟ್ಟ ಫಿರ್ಯಾದಿ ಮೇರೆಗೆ ಕೇಸನ್ನು ದಾಖಲು ಮಾಡಿಕೊಂಡು ಬೈಂದೂರು ಸರ್ಕಲ್ ಇನ್ಸ್‌ಪೆಕ್ಟರ್‌ರವರು ವಿಚಾರಣೆ ನಡೆಸಿರುತ್ತಾರೆ. ನೀರೋಡಿ ಮತ್ತು ಅಕ್ಕಪಕ್ಕದ ಗ್ರಾಮಗಳಿಗೆ ಭೇಟಿ ನೀಡಿ ವಿಚಾರಿಸಿದಾಗ ಕಾಣೆಯಾದ ಗೌರಿ ಪೂಜಾರ್ತಿ ಸುಮಾರು ೧೦ ವರ್ಷದ ಹಿಂದೆ ತನ್ನ ಗಂಡನನ್ನು ಬಿಟ್ಟು ಬೇರೆ ಇನ್ನಿಬ್ಬರ ಜೊತೆ ಅಕ್ರಮ ಸಂಪರ್ಕ ಇಟ್ಟುಕೊಂಡಿದ್ದು ಗಂಡನನ್ನು ಬಿಟ್ಟ ಮೇಲೆ ಎರಡು ಗಂಡು ಮಕ್ಕಳಿಗೆ ಜನ್ಮ ಕೊಟ್ಟಿದ್ದಾಗೆ ತಿಳಿದು ಬಂದಿದೆ. ಕಾಣೆಯಾದ ಸಮಯದಲ್ಲಿ ಆಕೆ ತನ್ನ ತಂಗಿಯ ಜೊತೆಗೆ ವಾಸಮಾಡುತ್ತಿದ್ದಳು. ದಿನಾಂಕ ೫-೨-೮೮ರ ಮುಂಜಾನೆ ಗದ್ದೆಗೆ ಹೋದ ಗೌರಿ ಪೂಜಾರ್ತಿ ತಿರುಗಿ ಬರಲಿಲ್ಲ. ಕೆಲವು ಸ್ಥಳೀಯ ವ್ಯಕ್ತಿಗಳು ಈ ಸಂದರ್ಭವನ್ನು ಬಳಸಿ